ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • MANGALURU
ಶುಕ್ರವಾರ 5 ಜುಲೈ 2024
5 JULY 2024

ಪ್ರದೇಶ ಸಮಾಚಾರ

ಸುದ್ದಿ ಕಾರ್ನರ್

ಮೈದುಂಬಿ ಹರಿದ ಕುಮಾರಧಾರಾ, ನೇತ್ರಾವತಿ

ಉಪ್ಪಿನಂಗಡಿ: ಸತತವಾಗಿ ಸುರಿಯುತ್ತಿರುವ ಮಳೆಯಿಂದ ಜಿಲ್ಲೆಯ ಜೀವ ನದಿಗಳಾದ ಕುಮಾರಧಾರಾ ಮತ್ತು ನೇತ್ರಾವತಿ ಮೈದುಂಬಿ ಹರಿಯಲಾರಂಭಿಸಿದೆ. ಅಪಾಯದ ಮಟ್ಟಕ್ಕಿಂತ 5 ಮೀಟರ್ ಕೆಳಗೆ ನೀರಿನ ಹರಿವು ದಾಖಲಾಗಿದೆ. ಉಪ್ಪಿನಂಗಡಿಯಲ್ಲಿ ಹವಾಮಾನ ಇಲಾಖೆಯ ಪ್ರಕಾರ ಜುಲೈ 3ರಂದು 68.4 ಮಿ.ಮೀಟರ್ ಮಳೆಯಾಗಿದೆ. ಗುರುವಾರದಂದು ಮಳೆಯ ಪ್ರಮಾಣ ಕಡಿಮೆ ಇದ್ದು, ದಿನವಿಡೀ ಹಗುರವಾದ ಮಳೆಯಾಗಿದೆ. ಗುರುವಾರದಂದು ಬೆಳಗ್ಗೆ ನದಿಯಲ್ಲಿ 26.6ರ ಮಟ್ಟದಲ್ಲಿ ನೀರಿನ ಹರಿವು ದಾಖಲಾಗಿದ್ದು, ಸಾಯಂಕಾಲದ ವೇಳೆಗೆ ನೀರಿನ ಹರಿವಿನ ಮಟ್ಟದಲ್ಲಿ ಕುಸಿತವುಂಟಾಗಿ 26.4 ಕ್ಕೆ ನೀರಿನ ಮಟ್ಟ ದಾಖಲಾಗಿತ್ತು. ಈ ಮಧ್ಯೆ ಉಪ್ಪಿನಂಗಡಿಯ ಗೃಹ ರಕ್ಷಕ ದಳದ ದಿನೇಶ್ ಬಿ ನೇತೃತ್ವದ ಪ್ರವಾಹ ರಕ್ಷಣಾ ತಂಡ ದೋಣಿಯನ್ನು ಸಿದ್ಧಪಡಿಸಿಕೊಂಡಿದ್ದಾರೆ.

ನೇತ್ರಾವತಿ ನೀರಿನ ಮಟ್ಟ ಏರಿಕೆಯಾಗಿರುವುದು.

2,400 ಮಂದಿಯ ದಾಖಲಾತಿ ಪರಿಶೀಲನೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪೋರ್ಟಲ್‌ನಲ್ಲಿ ಪ್ರಕಟಿಸಿರುವ ಯುಜಿಸಿಇಟಿ-2024 ಅಭ್ಯರ್ಥಿಗಳ ಮಾಹಿತಿಯಲ್ಲಿ ಕಂಡುಬಂದಿದ್ದ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಕೆಇಎ ಆರಂಭಿಸಿರುವ ಮೂರು ದಿನಗಳ ಉಪಕ್ರಮಕ್ಕೆ ಮೊದಲ ದಿನವಾದ ಗುರುವಾರ 2,400 ಅಭ್ಯರ್ಥಿಗಳು ಕೆಇಎ ಕಚೇರಿಗೆ ಖುದ್ದು ಹಾಜರಾಗಿ ದೋಷಗಳನ್ನು ಸರಿಪಡಿಸಿಕೊಂಡರು. ಅಭ್ಯರ್ಥಿಗಳಿಗೆ ತಿದ್ದುಪಡಿ ಮಾಡಲು ಅನುವು ಮಾಡಿಕೊಡುವುದಕ್ಕಾಗಿ ಕಚೇರಿ ಆವರಣದಲ್ಲಿ ಎರಡು ದೊಡ್ಡ ಅಳತೆಯ ಎಲ್‌ಇಡಿ ಪರದೆಗಳನ್ನು ಹಾಕಲಾಗಿತ್ತು. ಕ್ಯುಆರ್ ಕೋಡ್ ನೆರವಿನಿಂದ ಅದರಲ್ಲಿ ಅಭ್ಯರ್ಥಿಗಳಿಗೆ ತಿದ್ದುಪಡಿಗೆ ಅನುಸರಿಸಬೇಕಾದ ವಿಧಾನದ ಬಗ್ಗೆ ತಿಳಿಸಿಕೊಡಲಾಯಿತು. 1.8 ಲಕ್ಷಕ್ಕಿಂತ ಒಳಗಿನ ರ್‍ಯಾಂಕ್‌ನವರು ಜು. 5ರಂದು ಹಾಗೂ 1.8 ಲಕ್ಷಕ್ಕಿಂತ ಮೇಲ್ಪಟ್ಟ ರ್‍ಯಾಂಕ್‌ನವರು 6ರಂದು ಹಾಜರಾಗಬೇಕು ಎಂದು ವಿವರಿಸಲಾಗಿದೆ.

ಗಾಳಿ ಹೆಚ್ಚಳ ಸಾಧ್ಯತೆ । ಸಮುದ್ರಕ್ಕೆ ತೆರಳದಂತೆ ಮೀನುಗಾರರಿಗೆ ಸೂಚನೆ

ಆರೆಂಜ್ ಅಲರ್ಟ್ ಘೋಷಣೆ

ಮಂಗಳೂರು/ಉಡುಪಿ: ದ.ಕ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮುಂಗಾರು ಮಳೆ ವೇಗ ಪಡೆದುಕೊಂಡಿದ್ದು, ಗುರುವಾರ ದಿನಪೂರ್ತಿ ಮಳೆ ಸುರಿದಿದೆ. ಹವಾಮಾನ ಇಲಾಖೆ ಜುಲೈ 5ರಿಂದ 8ರವರೆಗೆ ಮೂರು ದಿನಗಳ ಕಾಲ ಭಾರಿ ಮಳೆಯಾಗುವ ಆರೆಂಜ್ ಅಲರ್ಟ್ ಘೋಷಿಸಿದೆ.

ಕಳೆದ ಎರಡು ದಿನಗಳಿಂದ ದ.ಕ.ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿದ್ದು, ಗುರುವಾರವೂ ಬೆಳಗ್ಗಿನಿಂದಲೇ ನಿರಂತರ ಮಳೆ ಕಾಣಿಸಿದೆ. ಮಂಗಳೂರು ಸಹಿತ ಗ್ರಾಮೀಣ ಭಾಗಗಳಲ್ಲಿ ಅವಿರತ ಮಳೆಯಾಗಿದೆ. ದಿನಪೂರ್ತಿ ಮಳೆ, ಮೋಡ ವಾತಾವರಣ ಕಂಡುಬಂದಿದೆ. ಭಾರಿ ಮಳೆ ಹಿನ್ನೆಲೆಯಲ್ಲಿ ದ.ಕ ಜಿಲ್ಲೆಯ ಬೆಳ್ತಂಗಡಿ ಮತ್ತು ಬಂಟ್ವಾಳ ತಾಲೂಕುಗಳಲ್ಲಿ ಶಾಲೆಗಳಿಗೆ ಗುರುವಾರ ರಜೆ ನೀಡಲಾಗಿತ್ತು.

ಕರಾವಳಿಯಲ್ಲಿ ಗುಡ್ಡಕುಸಿತ, ಸಾವಿನ ಸರಣಿ ಭೀತಿಯ ನಡುವೆಯೇ ಮಂಗಳೂರಿನ ದೇರೆಬೈಲಿನಲ್ಲಿ ಗುಡ್ಡಕುಸಿತ ಭೀತಿ ಉಂಟಾಗಿದೆ. ಗುರುವಾರ ಸುರಿದ ಭಾರಿ ಮಳೆಗೆ ದೇರೆಬೈಲು ಹೊಸ ಪೆಟ್ರೋಲ್ ಪಂಪ್ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಗುಡ್ಡ ಕುಸಿತ ಉಂಟಾಗಿದೆ. ಪೆಟ್ರೋಲ್ ಪಂಪ್ ನಿರ್ಮಾಣಕ್ಕಾಗಿ ಗುಡ್ಡ ಅಗೆದು ಸಮತಟ್ಟು ಮಾಡಲಾಗಿತ್ತು. ಇದೀಗ ಗುಡ್ಡ ಕುಸಿದು ಅಪಾಯದ ಸ್ಥಿತಿ ನಿರ್ಮಾಣವಾಗಿದೆ. ಸದ್ಯ ಮರಳಿನ ಚೀಲಗಳನ್ನು ಜೋಡಿಸಿ ಗುಡ್ಡ ಮತ್ತಷ್ಟು ಕುಸಿಯದಂತೆ ಕ್ರಮ ಕೈಗೊಳ್ಳಲಾಗಿದ್ದು, ಮಹಾನಗರ ಪಾಲಿಕೆ ಸೂಚನೆ ಮೇರೆಗೆ ಕಾಮಗಾರಿ ಸ್ಥಗಿತಗೊಳಿಸಲಾಗಿದೆ.

ಉಡುಪಿಯಲ್ಲಿ 53 ಮನೆಗಳಿಗೆ ಹಾನಿ: ಉಡುಪಿ ಜಿಲ್ಲೆಯಲ್ಲಿ ಭಾರಿ ಮಳೆ ಮುಂದುವರಿದಿದೆ. ಗುರುವಾರ ನಸುಕಿನ 4 ಗಂಟೆ ವೇಳೆಗೆ ಗುಡುಗು ಸಹಿತ ಭಾರಿ ಮಳೆ ಆರಂಭವಾಯಿತು. ಬಿರುಗಾಳಿಗೆ ಜಿಲ್ಲೆಯ 53 ಮನೆಗಳಿಗೆ ಹಾನಿ ಸಂಭವಿಸಿದೆ.

ಕುಂದಾಪುರ ತಾಲೂಕಿನ ರಟ್ಟಾಡಿ, ಅಮಾವಾಸ್ಯೆಬೈಲು ಹೆಂಗವಳ್ಳಿ, ಬೀಜಾಡಿ, ಹೊಸಂಗಡಿ, ವಂಡ್ಸೆ, ಕಸಬಾ ಗ್ರಾಮ, ಬ್ರಹ್ಮಾವರ ತಾಲೂಕಿನ ಹೊಸೂರು ಗ್ರಾಮ, ಉಡುಪಿ ತಾಲೂಕಿನ ಅತ್ರಾಡಿ, ಬೊಮ್ಮರಬೆಟ್ಟು, ಶಿವಳ್ಳಿ ಪುತ್ತೂರು ಗ್ರಾಮ, ಕಾರ್ಕಳ ತಾಲೂಕಿನ ಹಿರ್ಗಾನ, ಕಡಜಾರು, ರೆಂಜಾಳ ಗ್ರಾಮ, ಹೆಬ್ರಿ ತಾಲೂಕಿನ ಕಬ್ಬಿನಾಲೆ, ಅಲ್ಬಾಡಿ ಗ್ರಾಮ ಹಾಗೂ ಬೈಂದೂರು ತಾಲೂಕಿನ ಶಿರೂರು ಗ್ರಾಮಗಳ ಒಟ್ಟು 53 ಮನೆಗಳು ಭಾಗಶಃ ಹಾನಿಗೊಂಡಿವೆ. 20 ಕುಟುಂಬಗಳ ಅಡಕೆ ತೋಟ ಹಾಗೂ 8 ಕುಟುಂಬಗಳ ಜಾನುವಾರುಗಳಿದ್ದ ಕೊಟ್ಟಿಗೆ ಭಾಗಶಃ ಹಾನಿಯಾಗಿದೆ. 130 ವಿದ್ಯುತ್ ಕಂಬಗಳು ಉರುಳಿದ್ದು, 2.08 ಕಿ.ಮೀ.ನಷ್ಟು ವಿದ್ಯುತ್ ತಂತಿ ಹಾನಿಯಾಗಿದೆ. 10 ಟ್ರಾನ್ಸ್‌ಫಾರ್ಮರ್ ಕೆಟ್ಟಿವೆ.

ಬಿರುಗಾಳಿಯಿಂದ ಹಾನಿಗೊಂಡ ಕುಂದಾಪುರ ತಾಲೂಕಿನ ರಟ್ಟಾಡಿ ಗ್ರಾಮವೊಂದರ ಮನೆ.

ಸುಬ್ರಹ್ಮಣ್ಯದ ಕುಮಾರಧಾರಾ ನದಿ ಬದಿಯ ಸ್ನಾನಘಟ್ಟದಲ್ಲಿ ನೀರಿನ ಸೆಳೆತ ಜಾಸ್ತಿ ಇದ್ದು, ಭಕ್ತರಿಗೆ ಸ್ನಾನ ನಿರ್ಬಂಧಿಸಲಾಗಿದ್ದರೂ, ಇದೀಗ ನದಿ ತಟದಲ್ಲಿ ನೀರಿನ ಡ್ರಮ್‌ಗಳನ್ನು ಇರಿಸಿ ತೀರ್ಥಸ್ನಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪರಿಹಾರ ಕ್ರಮಕ್ಕೆ ಸಚಿವೆ ಹೆಬ್ಬಾಳ್ಕರ್ ಸೂಚನೆ

ಹಾನಿ ಕುರಿತು ಅಧಿಕಾರಿಗಳಿಂದ ದೂರವಾಣಿ ಮೂಲಕ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಸೂಕ್ತ ಕ್ರಮಕ್ಕೆ ಸೂಚನೆ ನೀಡಿದರು. ಬೆಂಗಳೂರಿನಲ್ಲಿ ಸಂಪುಟ ಸಭೆಗೆ ಹೊರಡುವ ಮುನ್ನ ಜಿಲ್ಲೆಯ ಪರಿಸ್ಥಿತಿಯ ಮಾಹಿತಿ ಕಲೆ ಹಾಕಿದರು. ಅಮಾಸೆಬೈಲು, ರಟ್ಟಾಡಿ ಸೇರಿದಂತೆ ಕೆಲವೆಡೆ ಮಳೆ, ಬಿರುಗಾಳಿಯಿಂದ ಉಂಟಾಗಿರುವ ಹಾನಿಯ ಮಾಹಿತಿ ಪಡೆದರು. ತಕ್ಷಣ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿ ವರದಿ ನೀಡುವಂತೆಯೂ ಸೂಚಿಸಿದರು.

ಚಾರ್ಮಾಡಿ ಘಾಟಿಯಲ್ಲಿ ಅಪಾಯ!

[illegible] ... ಮಳೆ ನೀರು ಘಾಟಿಯ ರಸ್ತೆಯಲ್ಲಿ ಹರಿಯುತ್ತಿದ್ದು [illegible] ... ಇಲ್ಲಿ ಕೆಲವೆಡೆ ಈಗಾಗಲೇ ಮರಳಿನ ಚೀಲ, ಟಾರ್ಪಾಲಿನ್ ಹಾಕಿದ್ದರೂ, ಸಂಪೂರ್ಣ ತಡೆ ಸಾಧ್ಯವಿಲ್ಲ. ಚಿಕ್ಕಮಗಳೂರು ವಿಭಾಗದ ವರಿಂದ ಆರು ಕಡೆಗಳಲ್ಲಿ ಘಾಟಿಯ ರಸ್ತೆ ಮಧ್ಯೆ ಬಿರುಕುಗಳು ಕಂಡುಬಂದಿವೆ. ಇನ್ನೊಂದೆಡೆ ರಸ್ತೆ ಬಿರುಕುಗಳ ಮೂಲಕ ನೀರು ಇಳಿಯುತ್ತಿದೆ.

ಚಾರ್ಮಾಡಿ ಘಾಟಿಯ ಚಿಕ್ಕಮಗಳೂರು ವಿಭಾಗದ ರಸ್ತೆ ಬದಿ ಕಟ್ಟಿರುವ ತಡೆಗೋಡೆ ಒಡೆದಿರುವುದು.

ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಬಳಿ ತುಂಬಿ ಹರಿಯುತ್ತಿರುವ ಬ್ರಹ್ಮಕುಂಡ ಹೊಳೆಯ ನೀರು ಗುರುವಾರ ಅನ್ನಛತ್ರ ಬಳಿ ಬಂದಿದೆ.

ಮಂಗಳೂರು ಕಥೋಲಿಕ್ ಕೋ-ಆಪರೇಟಿವ್ ಬ್ಯಾಂಕ್ ನಿ.

MCC BANK ESTD 1912

ಆಡಳಿತ ಕಛೇರಿ: ಎಂ.ಸಿ.ಸಿ. ಬ್ಯಾಂಕ್ ಬಿಲ್ಡಿಂಗ್, ಮುಲ್ಕಿ ಸುಂದರ ರಾಮ ಶೆಟ್ಟಿ ರಸ್ತೆ, ಹಂಪನಕಟ್ಟೆ, ಮಂಗಳೂರು 575001. ಫೋನ್ : 2421369, 2445742 ಇಮೇಯ್ಲ್: ho@mccbank.in | ವೆಬ್: www.mccbank.in

ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002ರ ನಿಯಮ9 (1)ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಕೆಳಗೆ ಸೂಚಿಸಿರುವ ಭದ್ರತಾದಾರರಲ್ಲಿ ಅಡಮಾನ ಮಾಡಿದ, ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದ್ದು, ಸದರಿ ಸ್ಥಿರಾಸ್ತಿಗಳನ್ನು 'ಎಲ್ಲಿ ಹೇಗಿದೆಯೋ ಹಾಗಿನ ಸ್ಥಿತಿ'ಯಲ್ಲಿ ಹಾಗೂ ಈ ಕೆಳಗೆ ತಿಳಿಸಿದ ನಿಯಮ, ನಿಬಂಧನೆಗಳಂತೆ ಮಂಗಳವಾರ, ದಿನಾಂಕ 29.07.2024 ರಂದು ಮಾರಾಟ ಮಾಡಲಾಗುವುದೆಂದು ಈ ಮೂಲಕ ಪ್ರಕಟಿಸಲಾಗಿದೆ.

ಮೀಸಲು ಬೆಲೆ / ಇಡಗಂಟು ಠೇವಣಿ ಹಣಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದ್ದು ಇಡಗಂಟು ಠೇವಣಿ ಹಣವನ್ನು ದಿನಾಂಕ 26.07.2024ರ ಸಂಜೆ 4.00ಗಂಟೆ ಒಳಗಾಗಿ ಈ ಕೆಳಗೆ ಸೂಚಿಸಿರುವ ಖಾತೆಗಳಿಗೆ ಆನ್‌ಲೈನ್ ಮೂಲಕ ಪಾವತಿಸಬಹುದಾಗಿದೆ.

ಕ್ರ ಸಂ	ಶಾಖೆಯ ಹೆಸರು / ಸಾಲಗಾರರ / ಜಾಮೀನುದಾರರ ಹೆಸರು ಮತ್ತು ವಿಳಾಸ / ಸ್ವಾಧೀನ ಪಡಿಸಿಕೊಂಡ ದಿನಾಂಕ / ಸ್ವಾಧೀನದ ವಿಧ	ಪ್ರಸ್ತುತ ಬಾಕಿ ಹಣ ರೂ. ಮತ್ತು ಬಡ್ಡಿ ಕೂಡಿಸಬೇಕಾದ ದಿನಾಂಕ	ಸ್ಥಿರಾಸ್ತಿ / ಸ್ಥಿರಾಸ್ತಿಗಳ ವಿವರ	ನಿಗದಿತ ಮೀಸಲು ಬೆಲೆ (ರೂ.)	ಇಡಗಂಟು ಠೇವಣಿ ಹಣ (ರೂ.)	ಹರಾಜು ಸಮಯ	ಹರಾಜಿನ ಹೆಚ್ಚಳದ ಮೌಲ್ಯರೂ.	ಇಎಂಡಿ ಪಾವತಿಸುವ ಖಾತೆ ನಂ., ಶಾಖೆ, ಐಎಫ್‌ಎಸ್‌ಸಿ ಕೋಡ್ ವಿವರ
1	ಸ್ಥಾಪಕರ (ಹಂಪನಕಟ್ಟೆ) ಶಾಖೆ ಸಾಲಗಾರರು/ಜಾಮೀನುದಾರರು: 1. ಶ್ರೀ ಕರುಣಾಕರ ಪೂಜಾರಿ ಬಿನ್ ಬಾಳಪ್ಪ ಪೂಜಾರಿ, ಮನೆ ನಂ.2-138, ಹೊಸಮಾರ ಪದವು, ಇರುವೈಲ್ ಗ್ರಾಮ, ಮಂಗಳೂರು574144 2. ಶ್ರೀಮತಿ ಭವಾನಿ ಕೋಂ ಕರುಣಾಕರ ಪೂಜಾರಿ, ಮನೆ ನಂ.2-138, ಹೊಸಮಾರ ಪದವು, ಇರುವೈಲ್ ಗ್ರಾಮ, ಮಂಗಳೂರು 574144. ಸ್ವಾಧೀನಪಡಿಸಿದ ದಿನಾಂಕ: 01.03.2024 ಸ್ವಾಧೀನಪಡಿಸಿದ ವಿಧ: ಭೌತಿಕ ಖಾತೆ ನಂಬ್ರಗಳು: ಗೃಹ ಸಾಲ HLTEMI/20190002 (002030320190002)	ಒಟ್ಟು ವಸೂಲಾಗಬೇಕಾದ ಮೊತ್ತ: ರೂ. 32,01,890/- (ದಿನಾಂಕ 31.05.2024 ರಂತೆ) + ಮುಂದಿನ ಬಡ್ಡಿ + ಖರ್ಚು.	ಮಂಗಳೂರು ತಾಲೂಕು ಮೂಳೂರು ಗ್ರಾಮದಲ್ಲಿರುವ ಗುರುಪುರ ಗ್ರಾಮ ಪಂಚಾಯತ್ ವ್ಯಾಪ್ತಿಗೊಳಪಟ್ಟ ಪರಿವರ್ತಿತ ಸ್ಥಿರಾಸ್ತಿ ಸರ್ವೆ ನಂ. 1/8B3ರಲ್ಲಿ 22 ಸೆಂಟ್ಸ್ ಹಾಗೂ ಅದರಲ್ಲಿರುವ "ಪೊಂಪೈ ರೆಸಿಡೆನ್ಸಿ" ಎಂಬ ಕಟ್ಟಡ ಸಂಕೀರ್ಣದ ಮೂರನೇ ಮಹಡಿಯಲ್ಲಿರುವ ಫ್ಲ್ಯಾಟ್ ನಂ.304, 1065 ಚ. ಅಡಿ ಅಳತೆ, ಮನೆ ನಂ.6/141/Y ಹಾಗೂ 2.88% ಅವಿಭಜಿತ ಹಕ್ಕು ಮತ್ತು ಸರ್ವಾಧಿ ಆಸ್ತಿ. ಸ್ವತ್ತಿನ ಸಂಖ್ಯೆ: 151100303800120204 ಕಟ್ಟಡ: 98.00 ಚ.ಮೀ. ಚೆಕ್ಕುಬಂದಿ: ಉತ್ತರ: ಎಸ್. ಡಿ ಲೈನ್ ದಕ್ಷಿಣ: ಎಸ್. ಡಿ ಲೈನ್ ಪೂರ್ವ: ಎಸ್. ಡಿ ಲೈನ್ ಪಶ್ಚಿಮ: ಎಸ್. ಡಿ ಲೈನ್	ರೂ. 23,97,000/-	ರೂ. 24,000/-	ಪೂರ್ವಾಹ್ನ 11.00 ರಿಂದ 12.00 ರ ವರೆಗೆ	ರೂ. 25,000/-	ಐಡಿಬಿಐ ಬ್ಯಾಂಕ್, ಉಡುಪಿ ಶಾಖೆ ಖಾತೆ ನಂ. 186102000000338 ಐಎಫ್‌ಎಸ್‌ಸಿ: IBKL0000186
2	ಸ್ಥಾಪಕರ (ಹಂಪನಕಟ್ಟೆ) ಶಾಖೆ ಸಾಲಗಾರರು/ಜಾಮೀನುದಾರರು: 1. ಶ್ರೀ ಮನೋಹರ್ ಪಿರೇರಾ, ಬಿನ್ ಜೂಲಿಯಾನ್ ಪಿರೇರಾ, ಮನೆ ನಂ.1-216, ಪಡುಗುಡ್ಡೆ ಮನೆ, ಎಡು ಅಂಚೆ, ಮೊಂಡಕಿಲ, ಮಂಗಳೂರು 575029. 2. ಶ್ರೀ ವಾಲ್ಟರ್ ಪಿರೇರಾ, ಬಿನ್ ಜೂಲಿಯಾನ್ ಪಿರೇರಾ, ಮನೆ ನಂ.1-216, ಪಡುಗುಡ್ಡೆ ಮನೆ, ಎಡು ಅಂಚೆ, ಮೊಂಡಕಿಲ, ಮಂಗಳೂರು 575029. ಸ್ವಾಧೀನಪಡಿಸಿದ ದಿನಾಂಕ: 18.01.2022 ಸ್ವಾಧೀನಪಡಿಸಿದ ವಿಧ: ಭೌತಿಕ ಖಾತೆ ನಂಬ್ರಗಳು: ಗೃಹ ಸಾಲ HLT20130008 (002030220130008) ಅಡಮಾನ ಸಾಲ MLT20170022 (002030820170022)	ಒಟ್ಟು ವಸೂಲಾಗಬೇಕಾದ ಮೊತ್ತ: ರೂ. 10,98,730/- (ದಿನಾಂಕ 31.05.2024 ರಂತೆ) + ಮುಂದಿನ ಬಡ್ಡಿ + ಖರ್ಚು.	ಮಂಗಳೂರು ತಾಲೂಕು 72-ಉಳಾಯಿಬೆಟ್ಟು ಗ್ರಾಮದಲ್ಲಿರುವ ಕೃಷಿಯೇತರ ಪರಿವರ್ತಿತ ವರ್ಗ ಪಟ್ಟಿನ ಸ್ಥಿರಾಸ್ತಿ ಸರ್ವೆ ನಂ. 9-2(ಪಿ) (ಆರ್.ಟಿ.ಸಿ. ಪ್ರಕಾರ 9/2ಪಿ8) ರಲ್ಲಿ 8.35 ಸೆಂಟ್ಸ್ (ಪೂರ್ವ ಮಧ್ಯ ಭಾಗ) ಹಾಗೂ ಅದರಲ್ಲಿರುವ ಆರ್.ಸಿ.ಸಿ. ವಾಸ್ತವ್ಯ ಕಟ್ಟಡದ ನೆಲಮಹಡಿ ಮತ್ತು ಮೊದಲ ಮಹಡಿಯಲ್ಲಿರುವ ಮನೆ ನಂ.4-134/5 ಮತ್ತು ಸರ್ವಾಧಿ ಆಸ್ತಿ. ಸ್ವತ್ತಿನ ಸಂಖ್ಯೆ: 151100302000120089 ಭೂಮಿ: 337.91 ಚ.ಮೀ. ಕಟ್ಟಡ:192.00 ಚ.ಮೀ. ಚೆಕ್ಕುಬಂದಿ: ಉತ್ತರ: ಅದೇ ಸರ್ವೆ ನಂಬರಿನ ಭಾಗ ದಕ್ಷಿಣ: ಅದೇ ಸರ್ವೆ ನಂಬರಿನ ಭಾಗ ಪೂರ್ವ: ರಸ್ತೆ ಪಶ್ಚಿಮ: ಅದೇ ಸರ್ವೆ ನಂಬರಿನ ಭಾಗ.	ರೂ. 40,00,000/-	ರೂ. 40,000/-	ಪೂರ್ವಾಹ್ನ 11.00 ರಿಂದ 12.00 ರ ವರೆಗೆ	ರೂ. 50,000/-	ಐಡಿಬಿಐ ಬ್ಯಾಂಕ್, ಉಡುಪಿ ಶಾಖೆ ಖಾತೆ ನಂ. 186102000000338 ಐಎಫ್‌ಎಸ್‌ಸಿ: IBKL0000186
3	ಉಡುಪಿ ಶಾಖೆ ಸಾಲಗಾರರು/ಜಾಮೀನುದಾರರು: 1. ಶ್ರೀ ಮೊಹಮ್ಮದ್ ಫಾರೂಕ್ ಬಿನ್ ಮೊಹಮ್ಮದ್ ದಾದಾ, ಮನೆ ನಂ.3-950, ಪೌಷಿಯ ಮಂಜಿಲ್, ಮಿಶನ್ ಕಂಪೌಂಡ್, ದುರ್ಗಾ ರಸ್ತೆ, ಸನ್ನಿ ಸೆಂಟರ್ ಬಳಿ, ಉದ್ಯಾವರ, ಉಡುಪಿ 574117. 2. ಶ್ರೀ ಅಬ್ದುಲ್ ಖಾದರ್ ಬಿನ್ ಡಿ. ಇಸ್ಮಾಯಿಲ್, ಮನೆ ನಂ.2-144, ಕಿಮ್ಮುಡಿದ್ದು ಮನೆ, ಪುಷ್ಪಮೊಗರು, ಸಿದ್ಧಕಟ್ಟೆ, ಮಂಗಳೂರು 574237. ಸ್ವಾಧೀನಪಡಿಸಿದ ದಿನಾಂಕ: 22.02.2024 ಸ್ವಾಧೀನಪಡಿಸಿದ ವಿಧ: ಭೌತಿಕ ಖಾತೆ ನಂಬ್ರಗಳು: ವ್ಯವಹಾರ ಸಾಲ BLT20180001 (013030120180001)	ಒಟ್ಟು ವಸೂಲಾಗಬೇಕಾದ ಮೊತ್ತ: ರೂ. 20,09,250/- (ದಿನಾಂಕ 31.03.2024 ರಂತೆ) + ಮುಂದಿನ ಬಡ್ಡಿ + ಖರ್ಚು.	ಮಂಗಳೂರು ತಾಲೂಕು ಬಡಗನಾಡು ಗ್ರಾಮದಲ್ಲಿರುವ ಗುರುಪುರ ಪಟ್ಟಣ ಪಂಚಾಯತ್ ವ್ಯಾಪ್ತಿಗೊಳಪಟ್ಟ ಪರಿವರ್ತಿತ ಸ್ಥಿರಾಸ್ತಿ ಸರ್ವೆ ನಂ. 52-24B2 ರಲ್ಲಿ 8 ಸೆಂಟ್ಸ್, 6.60 ಸೆಂಟ್ಸ್ ಮತ್ತು 16.40 ಸೆಂಟ್ಸ್ ಹಾಗೂ ಅದರಲ್ಲಿರುವ "ಅರಾರ್ ಟವರ್ಸ್" ಎಂಬ ಕಟ್ಟಡ ಸಂಕೀರ್ಣದ ಮೊದಲನೇ ಮಹಡಿಯಲ್ಲಿರುವ ವಾಣಿಜ್ಯ ಮಳಿಗೆ ನಂ.108, 448 ಚ. ಅಡಿ ಅಳತೆ, ಡೋರ್ ನಂ. 2-104C(15) ಹಾಗೂ 0.97% ಅವಿಭಜಿತ ಹಕ್ಕು ಮತ್ತು ಸರ್ವಾಧಿ ಆಸ್ತಿ. ಖಾತಾ ಸಂಖ್ಯೆ: 1-132/c-1-15 ಕಟ್ಟಡ: 41.06 ಚ.ಮೀ. ಚೆಕ್ಕುಬಂದಿ: (ಸ್ವತ್ತಿನ ಸಂಖ್ಯೆ 1) ಉತ್ತರ: ಅದೇ ಸರ್ವೇ ನಂಬರಿನ ಭಾಗ. ದಕ್ಷಿಣ: ಸರ್ವೇ ಲೈನ್ ಪೂರ್ವ: ಅದೇ ಸರ್ವೇ ನಂಬರಿನ ಭಾಗ. ಮತ್ತು ಪಶ್ಚಿಮ: ಅದೇ ಸರ್ವೇ ನಂಬರಿನ ಭಾಗ. (ಸ್ವತ್ತಿನ ಸಂಖ್ಯೆ 2) ಉತ್ತರ: ಅದೇ ಸರ್ವೇ ನಂಬರಿನ ಭಾಗ. ದಕ್ಷಿಣ: ಸರ್ವೇ ಲೈನ್ ಪೂರ್ವ: ಅದೇ ಸರ್ವೇ ನಂಬರಿನ ಭಾಗ. ಮತ್ತು ಪಶ್ಚಿಮ: ಅದೇ ಸರ್ವೇ ನಂಬರಿನ ಭಾಗ. (ಸ್ವತ್ತಿನ ಸಂಖ್ಯೆ 3) ಉತ್ತರ: ಅದೇ ಸರ್ವೇ ನಂಬರಿನ ಭಾಗ. ದಕ್ಷಿಣ: ಸರ್ವೇ ಲೈನ್ ಪೂರ್ವ: ಅದೇ ಸರ್ವೇ ನಂಬರಿನ ಭಾಗ. ಮತ್ತು ಪಶ್ಚಿಮ: ಅದೇ ಸರ್ವೇ ನಂಬರಿನ ಭಾಗ.	ರೂ. 6,63,000/-	ರೂ. 10,000/-	ಪೂರ್ವಾಹ್ನ 11.00 ರಿಂದ 12.00 ರ ವರೆಗೆ	ರೂ. 25,000/-	ಐಡಿಬಿಐ ಬ್ಯಾಂಕ್, ಉಡುಪಿ ಶಾಖೆ ಖಾತೆ ನಂ. 186102000000338 ಐಎಫ್‌ಎಸ್‌ಸಿ: IBKL0000186
4	[illegible] ಶಾಖೆ ಸಾಲಗಾರರು/ಜಾಮೀನುದಾರರು: 1. ಶ್ರೀಮತಿ [illegible], ಮನೆ ನಂ.14-115, [illegible] 574219 2. ಶ್ರೀ [illegible], ಮನೆ ನಂ.14-115, [illegible] 574219 3. ಶ್ರೀ [illegible], ಮನೆ ನಂ.15-310/1, [illegible] 574219 ಸ್ವಾಧೀನಪಡಿಸಿದ ದಿನಾಂಕ: 07.03.2024 ಸ್ವಾಧೀನಪಡಿಸಿದ ವಿಧ: ಭೌತಿಕ ಖಾತೆ ನಂಬ್ರಗಳು: ಗೃಹ ಸಾಲ [illegible]	ಒಟ್ಟು ವಸೂಲಾಗಬೇಕಾದ ಮೊತ್ತ: ರೂ. 20,95,660/- (ದಿನಾಂಕ 31.05.2024 ರಂತೆ) + ಮುಂದಿನ ಬಡ್ಡಿ + ಖರ್ಚು.	ಬಂಟ್ವಾಳ ತಾಲೂಕು [illegible] ಗ್ರಾಮದಲ್ಲಿರುವ ಪರಿವರ್ತಿತ ಸ್ಥಿರಾಸ್ತಿ ಸರ್ವೆ ನಂ. 50/1A1 ರಲ್ಲಿ 11 ಸೆಂಟ್ಸ್ ಹಾಗೂ ಅದರಲ್ಲಿರುವ "[illegible]" ಎಂಬ ವಾಸ್ತವ್ಯ ಕಟ್ಟಡದ [illegible] ಮಹಡಿಯಲ್ಲಿರುವ ಅಪಾರ್ಟ್‌ಮೆಂಟ್ ಸಂಖ್ಯೆ [illegible]2, 56.74 ಚ. ಮೀ ಅಳತೆಯ ಮನೆ ನಂ 1-198/11 ಮತ್ತು ಸರ್ವಾಧಿ ಆಸ್ತಿ. ಸ್ವತ್ತಿನ ಸಂಖ್ಯೆ: [illegible] ಕಟ್ಟಡ: 56.74 ಚ.ಮೀ ಸ್ವತ್ತಿನ ಸಂಖ್ಯೆ: [illegible] ಭೂಮಿ: 445.15 ಚ.ಮೀ ಚೆಕ್ಕುಬಂದಿ: ಉತ್ತರ: ಅದೇ ಸರ್ವೆ ನಂಬರಿನ ಭಾಗ. ದಕ್ಷಿಣ: ಅದೇ ಸರ್ವೆ ನಂಬರಿನ ಭಾಗ. ಪೂರ್ವ: ರಸ್ತೆ ಪಶ್ಚಿಮ: ಅದೇ ಸರ್ವೆ ನಂಬರಿನ ಭಾಗ.	ರೂ. 11,00,000/-	ರೂ. 15,000/-	ಪೂರ್ವಾಹ್ನ 11.00 ರಿಂದ 12.00 ರ ವರೆಗೆ	ರೂ. 25,000/-	ಐಡಿಬಿಐ ಬ್ಯಾಂಕ್, ಉಡುಪಿ ಶಾಖೆ ಖಾತೆ ನಂ. 186102000000338 ಐಎಫ್‌ಎಸ್‌ಸಿ: IBKL0000186

[illegible] ... ಅಧಿನಿಯಮ 2002 ರ [illegible]

[illegible] http://www.[illegible] ... www.mccbank.in [illegible]

[illegible]

ದಿನಾಂಕ : [illegible] 2024   ಸ್ಥಳ : ಮಂಗಳೂರು   [illegible]